ಆ ಮಧ್ಯಾಹ್ನ ಸರೋವರಕ್ಕೆ ವಿಹಾರಕ್ಕೆ ಹೊರಡುತ್ತಾ, ಸತ್ಯಸುಂದರ್‌ನನ್ನು ಕರೆದಳು. ಸತ್ಯಸುಂದರ್ ಬೇಡವೆನ್ನಲಿಲ್ಲ. 'ಬರ್ಡ್ಸ್ ಐಲ್ಯಾಂಡ್' ಕಡೆ ಹೊರಟರು. ಆ ದಿನ ಸೂರ್ಯ ಸರೋವರದ ಉದ್ದಕ್ಕೂ ಬೆಳಕಿನ ನರ್ತನ ಮಾಡುತ್ತಿದ್ದ. ಸ್ವಲ್ಪ ದೂರಕ್ಕೆ ಹೋಗುತ್ತಿದ್ದಂತೆಯೇ ಫ್ಲೆಮಿಂಗೋಗಳು ದರ್ಶನವಿತ್ತವು. ಅವುಗಳ ವಿನ್ಯಾಸಗಳನ್ನು ಅವನಿಗೆ ವಿವರಿಸಿ ಹೇಳುತ್ತಿದ್ದಳು. ದೋಣಿಯ ಸದ್ದಿಗೆ ಬೆಚ್ಚಿಬಿದ್ದು ಅಷ್ಟರಲ್ಲೇ ಸಾವರಿಸಿಕೊಂಡು ಒಮ್ಮೆಲೇ ಮೇಲಕ್ಕೆದ್ದು ವಿಶಾಲವಾದ ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿದ್ದರೆ ದೇವಲೋಕದ ಹಕ್ಕಿಗಳಂತೆ ಅನಿಸಿದ್ದು... ಅವನಿಗೆ ವಿವರಿಸಿದಳು. ಅವನ ಕ್ಯಾಮರಾವನ್ನು ಆ ಹಕ್ಕಿಗಳ ಕಡೆ ತಿರುಗಿಸಿ, ಆ ಫೋಟೊದಲ್ಲಿನ ಫ್ಲೆಮಿಂಗೋಗಳು ಚಿನ್ನದ ಬಣ್ಣದಲ್ಲಿ ಹೊಳೆಯುತ್ತಾ 'ದಿವ್ಯ ನರ್ತನ'ದಂತೆ ಕಾಣಿಸಿದ್ದು ಅವನಿಗೆ ವಿವರಿಸಿದಳು. ಮೊದಲ ಸಲ ಸತ್ಯಸುಂದರ್‌ನ ಮುಖದಲ್ಲಿ ತನ್ಮಯತೆಯಂಥ ಭಾವವನ್ನು ನೋಡಿದಳು.

ಸರೋವರದ ತೀರ ಹತ್ತಿರವಾಗುತ್ತಿದ್ದಂತೆ ಮೈಲುಗಟ್ಟಲೆ ಬೆಳೆದ ಜೊಂಡು ರಾಚತೊಡಗಿತು. ಆ ಜೊಂಡಿನ ಸಮೂಹಗಳನ್ನು ಬಳಸಿದ ಹಸಿರು ಪಾಚಿ. ಅವುಗಳ ಸುತ್ತಲೂ ಸಾವಿರಾರು ಮೀನಿನ ಮರಿಗಳು ಹಕ್ಕಿಗಳ ಸದ್ದನ್ನು ಕೇಳಿ ನೀರಿನಾಳಕ್ಕೆ ಓಡುವ ದೃಶ್ಯವನ್ನು ವಿವರಿಸುತ್ತಿದ್ದರೆ ಸತ್ಯಸುಂದರ್‌ನ ಮುಖ ಕಾಂತಿಯಿಂದ ಹೊಳೆಯಿತು. ಜೊಂಡಿನ ಸಮೂಹದ ನಡುವೆ ಸ್ವಲ್ಪ ಹೊತ್ತು ದೋಣಿಯನ್ನು ನಿಲ್ಲಿಸಿದರು. ಆಕೆ ಹಚ್ಚ ಹಸಿರು ನೀರಿನೊಳಕ್ಕೆ ಕೈಯಿಟ್ಟಳು. ನೀರು ಆಕೆಯ ಅಂಗೈಯನ್ನು ಮುತ್ತಿಡುತ್ತಿರುವುದು ಆಕೆಗೆ ಗೊತ್ತಾಗುತ್ತಿತ್ತು. ನಿಶ್ಚಲವಾಗಿದ್ದ ದೋಣಿಯ ಸುತ್ತಲೂ ನೂರಾರು ಹಕ್ಕಿಗಳು ಸೇರಿದವು. ಗುಂಪಾಗಿ ಅವರ ಸುತ್ತಲೂ ಸೇರಿ, ಕಪ್ಪು ಕಲೆಗಳ ನಡುವೆ ಅವರು ದೋಣಿಯ ಸಮೇತ ಅದೃಶ್ಯವಾದಂತೆ.

ದೋಣಿ 'ಕಾಳಿಜೈ' ಕಡೆ ಹೋಗುವಾಗ ಸಣ್ಣಗೆ ಹನಿ ಬೀಳಲಾರಂಭಿಸಿತು. ಆಕೆ ಕೈಗಳೆರಡನ್ನು ಮೇಲಕ್ಕೆತ್ತಿ ಮಳೆ ಹನಿಗಳನ್ನು ಆಲಂಗಿಸಿಕೊಳ್ಳತೊಡಗಿದಳು. ಸತ್ಯಸುಂದರ್ ನೀರಲ್ಲಿ ಕೈಯಿಟ್ಟು ಅಲೆಗಳೊಂದಿಗೆ ಸಂಭಾಷಿಸುತ್ತಿದ್ದ. ಮಳೆ ಕ್ರಮವಾಗಿ ಜೋರಾಯಿತು. ದೋಣಿಯ ವೇಗವನ್ನು ಹೆಚ್ಚಿಸಿದರು. ಅವರು ಕಾಳಿಜೈ ತಲುಪಿದಾಗ ಪೂರ್ತಿಯಾಗಿ ತೊಯ್ದಿದ್ದರು. ಕಾಳಿಜೈ ಸರೋವರದ ನಡುವಿನ ಎತ್ತರವಾದ ಕಲ್ಲುಗಳ ಬೆಟ್ಟ. ಬೆಟ್ಟದ ಮೇಲೆ ತುಂಬಾ ವರ್ಷಗಳ ಹಿಂದೆ ಕಾಳಿಜೈ ದೇವತೆಯ ಗುಡಿ ಇತ್ತು. ಇವರಿಬ್ಬರೂ ಅಲ್ಲಿಗೆ ತಪುಪಿದಾಗ ತುಂಬಾ ಜನ ಪ್ರವಾಸಿಗರು ಸೇರಿದ್ದರು. ಗುಡಿ ಮುಂದೆ ಸ್ನಾನಮಾಡಿ ಗುಡಿಯಲ್ಲಿ ಪೂಜೆ ಮುಗಿಸಿ ಸತ್ಯಸುಂದರನನ್ನು ಕೈಹಿಡಿದು ನಡೆಸುತ್ತಾ ಒಂದು ಎತ್ತರವಾದ ಕಲ್ಲಿನ ರಾಶಿಯ ಮೇಲೆ ಕೂಡಿಸಿದಳು. ಆಕೆ ಸರೋವರದ ದಡದಲ್ಲಿನ ಒಂದು ಸಿಮೆಂಟ್ ಮೆಟ್ಟಿಲ ಮೇಲೆ ಕುಳಿತು ನೀರಿನಲ್ಲಿ ಕಾಲುಗಳನ್ನು ಇಳಿಬಿಟ್ಟಿದ್ದಳು. ಈ ಕಾಳಿಜೈ ಪ್ರದೇಶ ಅಕೆಗೆ ತುಂಬಾ ಇಷ್ಟ. ಆಕೆಯ ಗಂಡ ಇಲ್ಲಿಗೆ ಬಂದಾಗಲೆಲ್ಲಾ ದೇವಸ್ಥಾನದಲ್ಲಿ ವಿಶೇಷವಾದ ಪೂಜೆಗಳನ್ನು ಮಾಡಿಸುತ್ತಿದ್ದ. ಆ ಪ್ರದೇಶವನ್ನು ನೋಡಿದಾಗಲೆಲ್ಲಾ ಆಕೆಗೆ ಗಂಡ ನೆನಪಿಗೆ ಬರುತ್ತಾನೆ. ಹಣೆಯ ಮೇಲೆ ಉದ್ದನೆಯ ಕುಂಕುಮವನ್ನಿಟ್ಟುಕೊಂಡು ಹೂವು, ತೆಂಗಿನಕಾಯಿಯೊಂದಿಗೆ ಗುಡಿಯಿಂದ ಹೊರಗೆ ಬರುತ್ತಿರುವ ಅವನ ರೂಪ ಕಣ್ಣಮುಂದೆ ಬಂತು. ಎದೆನೋವಿನಿಂದ ನರಳುವಾಗ ಅವನು ಈ ಗುಡಿ ಕಡೆ ತಿರುಗಿ ಜೀವಕ್ಕಾಗಿ ಪ್ರಾರ್ಥಿಸಿದ ಕ್ಷಣಗಳು ನೆನಪಿಗೆ ಬಂದವು.

ಆ ನೆನಪುಗಳಿಂದ ಹೊರಬಂದು ಪಕ್ಕಕ್ಕೆ ನೋಡಿದಳು. ಎತ್ತರವಾದ ಕಲ್ಲಿನ ಮೇಲೆ ಬುದ್ಧನಂತೆ ಕುಳಿತಿದ್ದ ಸತ್ಯಸುಂದರ್. ಅವನ ಸುತ್ತಲೂ ಹಳದಿ ಹೂಗಳ ಪೊದೆ. ಆ ಗಿಡಗಳ ನಡುವೆ ಅವನು ಹೂವಿನ ಕಿರೀಟ ಧರಿಸಿದವನಂತೆ ಕಾಣುತ್ತಿದ್ದ. ಅವನೊಂದಿಗೆ ಪರಿಚಯ ಆಕೆಗಿನ್ನೂ ಆಶ್ಚರ್ಯವಾಗಿಯೇ ಇದೆ. ಗಂಡ ಸತ್ತು ಹೋದ ಮೇಲೆ ಆಕೆ ಬೇರೆ ಗಂಡಸಿನ ಕುರಿತು ಯೋಚಿಸಿರಲಿಲ್ಲ. ಖಾಸಗಿ ಕಂಪೆನಿಯೊಂದರಲ್ಲಿ ಸೀನಿಯರ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದ ತಾರಳಿಗೆ ಈ ಸತ್ಯಸುಂದರ್ ಅಸಾಧಾರಣ ವ್ಯಕ್ತಿಯಂತೆ ಕಾಣಿಸತೊಡಗಿದ. 'ಮಿಸ್ಟಿಕ್ ಪರ್ಸನ್ ಈ ಸತ್ಯಸುಂದರ್' ಎಂದುಕೊಂಡಳು ಆಕೆ.

ಸತ್ಯಸುಂದರ್‌ನೊಂದಿಗೆ ಬೆಟ್ಟ ಇಳಿದು ದೋಣಿಯ ಕಡೆ ಹೋಗುವಾಗ ಒಂದು ಆಶ್ಚರ್ಯಕರವಾದ ಘಟನೆ ನಡೆಯಿತು. ದೋಣಿಯೊಳಗೆ ಹೆಜ್ಜೆ ಇಡುವಾಗ ಕಪ್ಪು ಬಣ್ಣದ, ಕುಳ್ಳನೆಯ ದಢೂತಿ ಬುಡಕಟ್ಟು ಹೆಂಗಸು